ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 23-01-1976--ಪಾರ್ಟ್-2

# *ಅಂತಿಮ ಸ್ಥಿತಿಯ ಪುರುಷಾರ್ಥ*

(लास्ट स्टेज का पुरूषार्थ)

**ಅತೀತವಾದ ವ್ಯಾಯಾಮ ಕಲಿಸುವವರು, ಸುಖಶಾಂತಿಯ ದಾತ, ಸರ್ವರ ಮನೋಕಾಮನೆಗಳನ್ನು ಪೂರ್ಣ ಮಾಡುವ ದಿವ್ಯ ಜ್ಯೋತಿರ್ಬಿಂದು ಸ್ವರೂಪ ಶಿವತಂದೆ ಮಾತನಾಡುತ್ತಿದ್ದಾರೆ.**

ಎಲ್ಲರೂ ಈ ಪ್ರತ್ಯಕ್ಷತೆಯ ವರ್ಷವನ್ನು ಆಚರಿಸಲು ಬಾಪ್‌ದಾದಾ ರವರನ್ನು ಪ್ರತ್ಯಕ್ಷಮಾಡುವ ಪ್ರಯತ್ನವಾಗಿ ವಾರ್ತಾಪತ್ರಿಕೆ ಮತ್ತು ಕಾರ್ಡುಗಳ ಮೂಲಕ ವಿಶೇಷರೂಪದಿಂದ ಪ್ರಯತ್ನಪಡುತ್ತಿದ್ದೀರಿ. ಇದೂ ಸಹ ಸೇವೆಗೆ ಅವಶ್ಯಕವಾದ ಸಾಧನವಾಗಿದೆ. ಆದರೆ ಈ ವಾರ್ತಾಪತ್ರಿಕೆ ಹಾಗೂ ಕಾರ್ಡುಗಳು ಮುಂತಾದವಂತು ಆ ದಿನ ನೋಡಿ, ಓದಿ ಅಥವಾ ಕೇಳಿದರೆಂದರೆ ನಂತರ ಸ್ಮೃತಿಯಲ್ಲಿ ಸಮಾವೇಶವಾಗಿಬಿಡುತ್ತದೆ. ಸಮಾಪ್ತಿಯೆಂದು ಹೇಳುವುದಿಲ್ಲ ಏಕೆಂದರೆ ಯಾವುದು ಸಮಾವೇಶವಾಗಿ ದೆಯೋ, ಇದೇ ಸ್ಮೃತಿಯು ಸಮಯದಲ್ಲಿ, ಸ್ವರೂಪದಲ್ಲಿ ಬರುತ್ತದೆ ಆದ್ದರಿಂದ ಸಮಾಪ್ತಿ ಎಂದು ಹೇಳುವುದಿಲ್ಲ ಆದರೆ ಸಮಾವೇಶವಾಯಿತು ಎಂದು ಹೇಳುತ್ತಾರೆ. ಇದರಿಂದಲೂ ಸಹ ಧರಣಿಯಲ್ಲಿ ಅಲ್ಪಸ್ವಲ್ಪ ಸ್ನೇಹದ ಮತ್ತು ಪರಿಚಯದ ಜಲವು ಬಿದ್ದಿತು ಆದರೆ ಈ ಬೀಜದಿಂದ ಪ್ರತ್ಯಕ್ಷತೆಯ ಫಲವು ಹೇಗೆ ಬರುತ್ತದೆ? ನೀರಂತು ಹಾಕಲಾಯಿತು, ಏಕೆ ಹಾಕಲಾಯಿತು? ಫಲಕ್ಕಾಗಿ, ಆ ಫಲವು ಹೇಗೆ ಬರುತ್ತದೆ ಅರ್ಥಾತ್ ಸಂಕಲ್ಪವು ಪ್ರತ್ಯಕ್ಷ ಸ್ವರೂಪದಲ್ಲಿ ಹೇಗೆ ಬರುತ್ತದೆ? ಇದಕ್ಕಾಗಿ ಸದಾ ಕಾರ್ಡುಗಳನ್ನು ಮುದ್ರಣ ಮಾಡಿಸುವುದಿಲ್ಲವೇ?

ಇತ್ತೀಚೆಗೆ ಮೆಜಾರಿಟಿ ಆತ್ಮರ ಇಚ್ಛೆಯೇನಾಗಿದೆ? (ಸುಖ- ಶಾಂತಿಯು ಪ್ರಾಪ್ತಿಯಾಗಲಿ) ಸುಖ-ಶಾಂತಿಯ ಪ್ರಾಪ್ತಿಯ ಇಚ್ಛೆಯಂತು ಇದೆ ಆದರೆ ವಿಶೇಷವಾಗಿ ಯಾವ ಭಕ್ತಾತ್ಮರಿದ್ದಾರೆ ಅವರ ಇಚ್ಛೆ ಯೇನಾಗಿದೆ? ಮೆಜಾರಿಟಿ ಭಕ್ತರ ಇಚ್ಛೆಯು ಕೇವಲ ಒಂದು ಸೆಕೆಂಡಿಗಾಗಿ ಲೈಟ್‌ನ್ನು ನೋಡುವುದಿರುತ್ತದೆ. ಅಂದಮೇಲೆ ಆ ಇಚ್ಛೆಯನ್ನು ಹೇಗೆ ಪೂರ್ಣಗೊಳಿಸುವಿರಿ? ಆ ಇಚ್ಛೆಯನ್ನು ಪೂರ್ಣಗೊಳಿಸುವ ಸಾಧನವು ಬ್ರಾಹ್ಮಣರ ನಯನಗಳಾಗಿವೆ. ಈ ನಯನಗಳ ಮೂಲಕ ತಂದೆಯ ಜ್ಯೋತಿಸ್ವರೂಪವು ಸಾಕ್ಷಾತ್ಕಾರವಾಗಬೇಕು. *ಈ ನಯನವು ನಯನವಾಗಿ ಕಾಣಿಸಬಾರದು ಆದರೆ ಲೈಟ್‌ನ ಗೋಲವಾಗಿ ಕಾಣಿಸಬೇಕು. ಹೇಗೆ ಆಕಾಶದಲ್ಲಿ ಹೊಳೆಯುತ್ತಿರುವಂತಹ ನಕ್ಷತ್ರಗಳು ಕಾಣಿಸುತ್ತವೆಯೋ ಹಾಗೆಯೇ ಈ ಕಣ್ಮಣಿಗಳು ನಕ್ಷತ್ರದ ಸಮಾನ ಹೊಳೆಯುತ್ತಿರುವಂತೆ ಕಾಣಿಸಬೇಕು. ಆದರೆ, ಯಾವಾಗ ಸ್ವಯಂ ಲೈಟ್ ಸ್ವರೂಪದಲ್ಲಿ ಸ್ಥಿತರಾಗುತ್ತೀರೋ ಆಗಲೇ ಕಾಣಿಸುತ್ತದೆ. ಕರ್ಮದಲ್ಲಿಯೂ ಲೈಟ್ ಅರ್ಥಾತ್ ಹಗುರತೆ ಮತ್ತು ಸ್ವರೂಪವೂ ಲೈಟ್, ಸ್ಥಿತಿಯೂ ಸಹ ಲೈಟ್ (ಹಗುರ) ಆಗಿರಬೇಕು. ಯಾವಾಗ ಇಂತಹ ಪುರುಷಾರ್ಥ ಅಥವಾ ಸ್ಥಿತಿ ಅಥವಾ ಸ್ಮೃತಿಸ್ವರೂಪವು ವಿಶೇಷ ಆತ್ಮರದಿರುತ್ತದೆಯೋ ಆಗ ವಿಶೇಷ ಆತ್ಮರನ್ನು ನೋಡಿ ಸರ್ವ ಪುರುಷಾರ್ಥಿಗಳ, ಪುರುಷಾರ್ಥವೂ ಇದೇ ಆಗಿರುತ್ತದೆ.* ಮತ್ತೆ-ಮತ್ತೆ ಕರ್ಮ ಮಾಡುತ್ತಲೂ ಪರಿಶೀಲನೆ ಮಾಡಿ- ಕರ್ಮದಲ್ಲಿ ಲೈಟ್ ಮತ್ತು ಹಗುರತೆಯಿದೆಯೇ? ಕರ್ಮದ ಹೊರೆಯಂತು ಇಲ್ಲವೇ? ಕರ್ಮದ ಹೊರೆಯು ತನ್ನ ಕಡೆ ಸೆಳೆಯುತ್ತದೆ. ಒಂದುವೇಳೆ ಕರ್ಮದಲ್ಲಿ ಹೊರೆಯಿಲ್ಲವೆಂದರೆ ತನ್ನ ಕಡೆ ಸೆಳೆಯುವುದಿಲ್ಲ ಆದರೆ ಕರ್ಮಯೋಗದಲ್ಲಿ ಪರಿವರ್ತನೆಯಾಗಿಬಿಡುತ್ತದೆ.

ಅಂದಮೇಲೆ ಪ್ರತ್ಯಕ್ಷತೆಯ ವರ್ಷವನ್ನಾಚರಿಸುವ ಇದೇ ಸ್ವರೂಪ ಮತ್ತು ಸಾಧನವು ಎಲ್ಲರ ಬುದ್ಧಿಯಲ್ಲಿದೆಯೇ? ಹೇಗೆ ಸಾಕಾರನಲ್ಲಿ (ಬ್ರಹ್ಮಾಬಾಬಾ) ನೋಡಿದಿರಿ - ಎಷ್ಟೇ ಅತಿಕರ್ಮದಲ್ಲಿ ಬರುತ್ತಿದ್ದರು, ವಿಸ್ತಾರದಲ್ಲಿ ಬರುವುದು, ರಮಣೀಕತೆಯಲ್ಲಿ ಬರುವುದು, ಸಂಬಂಧ ಸಂಪರ್ಕದಲ್ಲಿ ಬರುತ್ತಿದ್ದರೋ ಅಷ್ಟೇ ಈಗೀಗ ಸಂಬಂಧ-ಸಂಪರ್ಕದಲ್ಲಿ ಬರುತ್ತಿದ್ದರೂ ಸಹ ಭಿನ್ನರಾಗಿಬಿಡುತ್ತಿದ್ದರು. ಹೇಗೆ ಸಂಬಂಧ ಹಾಗೂ ಕರ್ಮದಲ್ಲಿ ಬರುವುದು ಸಹಜವಾಗಿದೆಯೋ ಹಾಗೆಯೇ ಭಿನ್ನರಾಗುವುದೂ

ಸಹಜವಾಗಿದೆ - ಇಂತಹ ಅಭ್ಯಾಸವಿರಬೇಕಾಗಿದೆ. ಈಗೀಗ ಅತಿ, ಈಗೀಗ ಅಂತ್ಯವಾಗಬೇಕು. ಇದು ಅಂತಿಮ ವರ್ಷದ ಹಾಗೂ ಅಂತಿಮ ಸ್ಥಿತಿಯ ಪುರುಷಾರ್ಥವಾಗಿದೆ. ಇಂತಹ ಯೋಜನೆಯನ್ನು ತಯಾರು ಮಾಡಬೇಕು. ಇದರ ರಿಹರ್ಸಲ್ ಮಾಡಿ ಮತ್ತು ಡ್ರಿಲ್ ಮಾಡಿ- ಅತಿ ಮತ್ತು ಅಂತ್ಯದ ಡ್ರಿಲ್. ಈಗೀಗ ಅತಿ ಸಂಬಂಧದಲ್ಲಿ ಮತ್ತು ಈಗೀಗ ಸಂಬಂಧದಲ್ಲಿ ಎಷ್ಟಿರುತ್ತೀರಿ ಅಷ್ಟೇ ಭಿನ್ನರಾಗುವುದು. ಹೇಗೆ ಲೈಟ್ ಹೌಸ್‌ನಲ್ಲಿ ಸಮಾವೇಶವಾಗುವಂತೆ ಅಭ್ಯಾಸವಿರಬೇಕು. ಲೈಟ್‌ಹೌಸ್ ಅರ್ಥಾತ್ ತಮ್ಮ ಜ್ಯೋತಿಯ ದೇಶವಾಗಿದೆ. ಈಗೀಗ ಕರ್ಮಕ್ಷೇತ್ರ, ಈಗೀಗ ಪರಮ ಧಾಮದಲ್ಲಿ ಇರಬೇಕು. ಒಳ್ಳೆಯದು

**ದುಃಖ ಅಥವಾ ನಿಂದೆಯಲ್ಲಿಯೂ ಕಲ್ಯಾಣ (ಮಾತೆಯರೊಂದಿಗೆ).**

ಬಾಪ್‌ದಾದಾರವರಿಗೆ ಆದಿಯಿಂದ ಮಾತೆಯರೊಂದಿಗೆ ಸ್ನೇಹವಿದೆ. ಯಜ್ಞದ ಸ್ಥಾಪನೆಯಲ್ಲಿಯೂ ವಿಶೇಷವಾದ ಪಾತ್ರವು ಯಾರದಿತ್ತು, ಯಾರು ನಿಮಿತ್ತರಾದರು? ಮತ್ತು ಅಂತ್ಯದಲ್ಲಿಯೂ ಪ್ರತ್ಯಕ್ಷತೆ ಮತ್ತು ವಿಜಯದ ನಗಾರಿಯನ್ನು ಮೊಳಗಿಸಲು ಯಾರು ನಿಮಿತ್ತರಾಗು ತ್ತಾರೆ? ಮಾತೆಯರು. ಸಂಗಮದಲ್ಲಿ ಗೋಪಿಕೆಯರ ವಿಶೇಷ ಪಾತ್ರವಿದೆ- ಗೋಪಿವಲ್ಲಭನ ಗಾಯನವಿದೆ. ಮಾತೆಯರು ಸದಾ ಈ ಇಚ್ಛೆಯನ್ನಿಡುತ್ತಾರೆ - ಇಂತಹವರು ನಮ್ಮನ್ನು ತನ್ನವರನ್ನಾಗಿ ಮಾಡಿಕೊಳ್ಳಬೇಕು ಅವರು ಶ್ರೇಷ್ಠರಾಗಿರಬೇಕು, ಒಳ್ಳೆಯ ವರನು ಸಿಗಲಿ, ಒಳ್ಳೆಯ ಮನೆಯು ಸಿಗಲಿ. ಸ್ವಯಂ ಬಾಬಾರವರು ನಮ್ಮನ್ನು ತನ್ನವರನ್ನಾಗಿ ಮಾಡಿಕೊಂಡಾಗ ಮತ್ತೇನು ಬೇಕಾಗಿದೆ? ಈ ಕಲ್ಯಾಣಕಾರಿ ಯುಗದಲ್ಲಿ ಯಾವುದೇ ಪರಿಸ್ಥಿತಿಗಳು ಬರುತ್ತದೆಯೆಂದರೆ ಆ ಪರಿಸ್ಥಿತಿಯನ್ನು ನೋಡದೆ, ವರ್ತಮಾನವನ್ನೂ ನೋಡದೆ, ವರ್ತಮಾನದಲ್ಲಿ ಭವಿಷ್ಯವನ್ನು ನೋಡಬೇಕು. ತಿಳಿದುಕೊಳ್ಳಿ, ಯಾರಾದರೂ ದುಃಖವನ್ನು ಕೊಡುತ್ತಾರೆ ಅಥವಾ ನಿಂದನೆ ಹಾಕುತ್ತಾರೆಂದರೆ ಅದರಲ್ಲಿಯೂ ನನ್ನ ಕಲ್ಯಾಣವಿದೆಯೆಂದು ನೋಡಿ. ಕಲ್ಯಾಣವು ಇದಾಗಿದೆ- ಆ ದುಃಖ ಅಥವಾ ನಿಂದನೆಯೇ ಸುಖದಾತನ ನೆನಪಿನ ಸಮೀಪತೆಯನ್ನು ತರುತ್ತದೆ. ಬಾಹರ್ಮುಖಿಯಾಗಿ ನೋಡ ಬಾರದು, ಕಲ್ಯಾಣದ ರೂಪದಿಂದ ನೋಡಿದಾಗ ಯಾವುದೇ ಪರಿಸ್ಥಿತಿ, ಕಠಿಣವಾದ ಪರಿಸ್ಥಿತಿಯೆನಿಸುವುದಿಲ್ಲ. ಇದರಿಂದ ತಮ್ಮ ಉನ್ನತಿ ಯನ್ನು ಮಾಡಿಕೊಳ್ಳಲು ಸಾಧ್ಯವಿದೆ. ಒಳ್ಳೆಯದು

ಅವ್ಯಕ್ತ ಮುರಳಿ 23-01-1976. ಪಾರ್ಟ್-2

***ಅಂತಿಮ ಸ್ಥಿತಿಯ ಪುರುಷಾರ್ಥ***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಕರ್ಮದಲ್ಲಿ, ಸ್ವರೂಪದಲ್ಲಿ, ಸ್ಥಿತಿಯಲ್ಲಿ, ಹಗುರವಾಗಿ ಇರುತ್ತಾ ಭಕ್ತರಿಗೆ ನನ್ನ ನಯನಗಳಿಂದ ತಂದೆಯ ಜ್ಯೋತಿ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಸಿದ್ದೇನೆ.

2. ನಾನು ಕರ್ಮಭೋಗವನ್ನು ಕರ್ಮ ಯೋಗದಲ್ಲಿ ಪರಿವರ್ತನೆ ಮಾಡಿಕೊಂಡಿದ್ದೇನೆ.

3. ನಾನು ಕರ್ಮದಲ್ಲಿ ಬರುವುದು ಎಷ್ಟು ಸಹಜವು ಕರ್ಮದಿಂದ ಅತಿತವಾಗುವುದನ್ನು ಕೂಡ ಅಷ್ಟೇ ಸಹಜವಾಗಿ ಮಾಡಿಕೊಂಡಿರುವ ಅಂತಿಮ ಪುರುಷಾರ್ಥಿ.

4. ನಾನು ಈಗೀಗಲೇ ಕರ್ಮ ಕ್ಷೇತ್ರದಲ್ಲಿ ಇರುತ್ತಾ, ಈಗೀಗಲೇ ಪರಂಧಾಮ ನಿವಾಸಿ ಆಗಬಲ್ಲೆನು.

5. ನಾನು ಅಂತಿಮದಲ್ಲಿ ಪ್ರತ್ಯಕ್ಷತೆ ಅಥವಾ ವಿಜಯದ ನಿನಾದವನ್ನು ಮೊಳಗಿಸುವ ಜಗನ್ಮಾತೆಯಾಗಿದ್ದೇನೆ.

6. ನಾನು ಪ್ರತಿಯೊಂದು ಪರಿಸ್ಥಿತಿಯನ್ನು ಕಲ್ಯಾಣ ರೂಪದಲ್ಲಿ ನೋಡಿ ನನ್ನ ಉನ್ನತಿಯನ್ನು ಮಾಡಿಕೊಂಡಿದ್ದೇನೆ.